# ಸಾರ್ಥಕ ಬದುಕಿಗೆ ಗೀತೆಯ ಕರ್ಮಯೋಗದ ಬೆಳಕು

ಸ್ವಾಮಿ ಮುಕ್ತಿದಾನಂದ

ಭಗವದ್ಗೀತೆಯು ಜಗತ್ತಿಗೆ ನೀಡಿದ ಅತಿಶ್ರೇಷ್ಠ ಕೊಡುಗೆಯೇ ಕರ್ಮಯೋಗದ ಆದರ್ಶ. ಇದು ತತ್ತ್ವವೂ ಹೌದು, ಆಧ್ಯಾತ್ಮಿಕ ಸಾಧನೆಯ ಮಾರ್ಗವೂ ಹೌದು, ಎಲ್ಲಕ್ಕಿಂತ ಹೆಚ್ಚಾಗಿ ಜೀವನಧರ್ಮವೂ ಆಗಬಲ್ಲುದು. ಒಟ್ಟು ಜೀವನ ವಿಧಾನವನ್ನೇ ಉನ್ನತ ಹಂತಕ್ಕೆ ಏರಿಸಬಲ್ಲ ಈ ದಿವ್ಯ ಮಾರ್ಗವನ್ನು ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ 'ವಿವೇಕಪ್ರಭ'ದ ವ್ಯವಸ್ಥಾಪಕ ಸಂಪಾದಕರು. ರಾಮಕೃಷ್ಣ ಮಹಾಸಂಘದ ವಿಶ್ವಸ್ತ ಮಂಡಲಿಯ ಸದಸ್ಯರಾಗಿರುವ ಅವರು ಉತ್ತಮ ಚಿಂತಕರೂ, ಪ್ರವಚನಕಾರರೂ, ಲೇಖಕರೂ ಆಗಿದ್ದಾರೆ.



ಕ್ರಿಯೆ ಎಂಬುದೇ ಜೀವನ. ಈ ಜಗತ್ತಿನ ಎಲ್ಲ ವ್ಯವಹಾರವೂ ಕರ್ಮಪ್ರಧಾನವಾಗಿದೆ. ಕರ್ಮ ಎನ್ನುವುದನ್ನು ಬದುಕಿನ ಸ್ಥಿತಿ-ಗತಿ, ವಿಧಿ ಹಾಗೂ ಹಣೆಬರಹ ಮುಂತಾದ ಪದಗಳಿಂದಲೂ ಸೂಚಿಸಲಾಗುತ್ತದೆ. ನಮಗೊದಗುವ ಕಷ್ಟ-ಕಾರ್ಪಣ್ಯಗಳು, ಸುಖ-ನೆಮ್ಮದಿಗಳು ನಮ್ಮ ಬದುಕಿನಲ್ಲಿ ಸಂಭವಿಸುವ ಎಲ್ಲವೂ ಕರ್ಮದ ಪ್ರಭಾವದಿಂದಲೇ ಉಂಟಾಗುತ್ತವೆ. ಮಾನಸಿಕ ಮತ್ತು ಭೌತಿಕವಾದ ಹಾಗೂ ಸ್ಥೂಲ ಮತ್ತು ಸೂಕ್ಷ್ಮ ಚಲನವಲನಗಳಿಂದ ನಮ್ಮ ಬದುಕಿನ ಎಲ್ಲಕ್ಕೂ ಆಧಾರವಾಗಿರುವ ಈ ಕರ್ಮದ ಒಳಮರ್ಮವನ್ನು ತಿಳಿಯುವುದು ಅಗತ್ಯ. ತ್ರಿಗುಣಾತ್ಮಿಕ ಪ್ರಕೃತಿಯಲ್ಲಿ ಕರ್ಮವು ಸಹಜವಾಗಿ ಅತಿ ಗಹನವಾಗಿ, ಅತಿ ಸೂಕ್ಷ್ಮ ಮತ್ತು ಸ್ಥೂಲ ರೂಪಗಳಲ್ಲಿ ನಿಹಿತವಾಗಿದೆ. ಈ ಭುವಿಯಲ್ಲಿನ ನಮ್ಮ ಬದುಕು ಕರ್ಮಾಧೀನವಾಗಿದೆ ಎಂಬುದು ವಾಸ್ತವ. ಆದ್ದರಿಂದ ಈ ಕರ್ಮಭೂಮಿಯಲ್ಲಿರುವ ಎಲ್ಲರ ಬದುಕನ್ನು ಶ್ರೇಯಸ್ಕರ ಮತ್ತು ಪರಿಪೂರ್ಣವನ್ನಾಗಿ ಮಾಡಲು ಕರ್ಮಗಳ ವಿಧಿ-ನಿಷೇಧ ನಿಯಮಗಳ ಸಮಗ್ರವಾದ ಕರ್ಮ-ವಿಜ್ಞಾನವನ್ನು ತಿಳಿಯುವುದು ಅಗತ್ಯ.

ಗೀತೆಯಲ್ಲಿನ ಮುಖ್ಯ ಸ್ವಾರಸ್ಯವೆಂದರೆ ಈ ಜೀವಿಯ ಬವಣೆಗಳಿಗೆ, ಬಂಧನಗಳಿಗೆ ಕರ್ಮವು ಹೇಗೆ ಕಾರಣವೋ, ಆ ಬಂಧನಗಳಿಂದ ಬಿಡುಗಡೆ ಹೊಂದುವುದು ಕರ್ಮದ ಮೂಲಕವೇ ಎಂಬುದನ್ನು ನಿಚ್ಚಳವಾಗಿ ತಿಳಿಸಿಕೊಡುವುದೇ ಆಗಿದೆ. ಗೀತೆಯಲ್ಲಿನ ಬಹಳಷ್ಟು ಅಧ್ಯಾಯಗಳಲ್ಲಿ ಕರ್ಮವನ್ನು ಕುರಿತು ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ ಉಕ್ತಿಗಳು ನಮಗೆ ಕರ್ಮದ ಹಾಗೂ ಕರ್ಮಯೋಗದ ಕುರಿತಾಗಿ ಅನೇಕ ಒಳನೋಟಗಳನ್ನು, ಕರ್ಮದ ಔಚಿತ್ಯವನ್ನು, ಸಕಲ ಕರ್ಮವನ್ನು ಯೋಗವನ್ನಾಗಿ ಪರಿವರ್ತಿಸುವ ವಿಧಾನವನ್ನು ಹಾಗೂ ಕರ್ಮದ ಬಂಧನದಿಂದ ಪಾರಾಗಿ, ಮುಕ್ತಿಯ ಮಾರ್ಗವನ್ನು ಸಾಧಿಸುವ ವಿಧಾನವನ್ನು ವಿವರಿಸಿ ತಿಳಿಸಿಕೊಡುತ್ತವೆ.

ಕರ್ಮ ಎಂಬುದು ಬದುಕಿನೊಂದಿಗೆ ಎಷ್ಟು ತಳಕು ಹಾಕಿಕೊಂಡಿದೆ ಎಂಬುದನ್ನು ಶ್ರೀಕೃಷ್ಣನು ಒಂದು ಪ್ರಮುಖವಾದ ಶ್ಲೋಕದಲ್ಲಿ ತಿಳಿಸಿಕೊಡುತ್ತಾನೆ:

**ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।**
**ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥**

*(ಭಗವದ್ಗೀತೆ, ೩.೫)*

'ಯಾರೂ ಸಹ ಎಂದಿಗೂ ಒಂದು ಕ್ಷಣಮಾತ್ರವಾದರೂ ಕೆಲಸ ಮಾಡದೆ ಇರಲಾರನು. ಏಕೆಂದರೆ ಪ್ರತಿಯೊಬ್ಬನೂ ಪ್ರಕೃತಿಯಿಂದ ಹುಟ್ಟಿದ ಸತ್ತ್ವ-ರಜ-ತಮೋಗುಣಗಳಿಗೆ ವಶನಾಗಿ ಕರ್ಮವನ್ನು ಮಾಡುತ್ತಲೇ ಇರುತ್ತಾನೆ.'

ಕರ್ಮದ ಮಹತ್ವವನ್ನು ತಿಳಿಸಿಕೊಡಲು ಸಾಕ್ಷಾತ್ ಭಗವಂತನೇ ದೇಹಧಾರಿಯಾಗಿ ಈ ಕರ್ಮಭೂಮಿಗೆ ಬಂದು, ಕರ್ಮಾಧ್ಯಕ್ಷನಾಗಿ ಬದುಕಿನ ತುಮುಲಗಳ ಮಧ್ಯದಲ್ಲಿ ಅರ್ಜುನನಿಗೆ ಯುದ್ಧಭೂಮಿಯಲ್ಲಿ ಗೀತೆಯ ಮೂಲಕ ತಾನು ನಿರ್ವಹಿಸಬೇಕಾದ ಕರ್ತವ್ಯದ ಬಗ್ಗೆ ಎಚ್ಚರಿಸುತ್ತಾನೆ. ಶ್ರೀಕೃಷ್ಣನು ಬೋಧಿಸಿದ ಕರ್ಮರಹಸ್ಯವು ಅರ್ಜುನನಲ್ಲಿ ಜಾಗೃತಿಯನ್ನು ಮೂಡಿಸಿ, ಅವನು ಕರ್ತವ್ಯಪರಾಯಣನಾಗುತ್ತಾನೆ.

ಗೀತೆಯಲ್ಲಿ ಬೋಧಿಸಲಾಗಿರುವ ಕರ್ಮಯೋಗದ ತತ್ತ್ವ ಮತ್ತು ವಿಧಾನಗಳು ನಾವು ನಿತ್ಯಜೀವನದಲ್ಲಿ ಮಾಡಬೇಕಾದ ಸಕಲ ಕರ್ಮಗಳನ್ನು ಯಾವ ದೃಷ್ಟಿಕೋನದಿಂದ ಹಾಗೂ ಯಾವ ರೀತಿಯಲ್ಲಿ ಮಾಡಬೇಕು ಎಂಬ ನಿಟ್ಟಿನಲ್ಲಿ ನಮಗೆ ಮಾರ್ಗದರ್ಶಕ ಸೂತ್ರಗಳಾಗಿವೆ. ಈ ಮಾರ್ಗದರ್ಶಕ ಸೂತ್ರಗಳನ್ನು ಸ್ಪಷ್ಟತೆಯ ಅನುಕೂಲಕ್ಕಾಗಿ ನಾವು ಈ ರೀತಿ ವಿಂಗಡಿಸಬಹುದು:

೧. ಫಲಾಪೇಕ್ಷೆಯಿಂದ ಬಂಧಿತನಾಗದೆ ಕರ್ಮ ಮಾಡಬೇಕು – **ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ॥**

೨. ಯೌಗಿಕ ಕುಶಲತೆಯಿಂದ ಮಾಡಬೇಕು – **ಯೋಗಃ ಕರ್ಮಸು ಕೌಶಲಂ ।**

೩. ಯಜ್ಞದೃಷ್ಟಿಯಿಂದ – **ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।**

೪. ಭಗವದರ್ಪಣ ಬುದ್ಧಿಯಿಂದ– **ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್, ಯತ್ ತಪಸ್ಯಸಿ ಕೌಂತೇಯ ತತ್ ಕುರುಷ್ವ ಮದರ್ಪಣಂ ॥**

೫. ಸಮತ್ವದಿಂದ – **ಸಮತ್ವಂ ಯೋಗ ಉಚ್ಯತೇ ।**

೬. ಯೋಗದೃಷ್ಟಿಯಿಂದ – **ಯೋಗಸ್ಥಃ ಕುರು ಕರ್ಮಾಣಿ**

೭. ಸಾಕ್ಷೀಭಾವದಿಂದ

೮. ಅಧ್ಯಾತ್ಮ ಚೇತಸ್ಸಿನಿಂದ

೯. ಲೋಕಸಂಗ್ರಹ ದೃಷ್ಟಿಯಿಂದ – ಮಾಡಿದರೆ ಕರ್ಮಕೇಂದ್ರಿತವಾದ ನಮ್ಮ ನಿತ್ಯಜೀವನ ಕರ್ಮಯೋಗವಾಗಿ ಆಧ್ಯಾತ್ಮಿಕ ಸಿದ್ಧಿಯನ್ನು ಕೊಡಬಲ್ಲದು ಎಂದು ಗೀತೆಯು ನಮಗೆ ಸಾರಿ ಹೇಳುತ್ತದೆ. ಇದೇ ಗೀತೆಯ ಕರ್ಮಯೋಗದ ಸಾರಭೂತ ಜ್ಞಾನ.

### ೧. ಫಲಾಪೇಕ್ಷೆಯಿಂದ ಬಂಧಿತನಾಗದೆ ಕರ್ಮಗಳನ್ನು ಮಾಡು

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಽಸ್ತ್ವಕರ್ಮಣಿ ॥**

*(ಗೀತೆ, ೨.೪೭)*

'ಕರ್ಮದಲ್ಲಿಯೇ ನಿನಗೆ ಅಧಿಕಾರವು; ಕರ್ಮಫಲದಲ್ಲಿ ಎಂದಿಗೂ ಆಸಕ್ತನಾಗಿರಬೇಡ; ಕರ್ಮಫಲಕ್ಕೆ ಕಾರಣನಾಗಬೇಡ; ಕರ್ಮವನ್ನು ಬಿಡುವುದರಲ್ಲಿ ನಿನಗೆ ಪ್ರೀತಿಯಾಗದಿರಲಿ.'

ಕರ್ಮ, ಕರ್ಮಫಲ ಮತ್ತು ಕರ್ತೃ (ಕರ್ಮ ಮಾಡಿದವನು) – ಇವುಗಳು ಕರ್ಮಪ್ರಕ್ರಿಯೆಯ ಸಾಮಾನ್ಯ ಮೂರು ಘಟಕಗಳು. ಕರ್ಮಫಲದಲ್ಲಿಯೇ ಅತೀವ ಆಸಕ್ತನಾಗಿರುವುದೇ ಈ ಪ್ರಪಂಚದಲ್ಲಿನ ಕಷ್ಟ, ನಿರಾಸೆ, ದುಃಖಕ್ಕೆ ಮೂಲ ಕಾರಣವಾಗಿದೆ ಎಂಬುದು ಕರ್ಮಯೋಗದ ಮುಖ್ಯ ಸಿದ್ಧಾಂತ. ನಾವು ವ್ಯಕ್ತಿಗತ ಮತ್ತು ಸಾಮೂಹಿಕ ಕರ್ಮಗಳನ್ನು ಪ್ರತಿಫಲಾಪೇಕ್ಷೆಯಿಂದ ಮಾಡುವುದು ಸಹಜ. ಆದರೆ ಗೀತೆಯ ಕರ್ಮಯೋಗ ಸಿದ್ಧಾಂತವೇನೆಂದರೆ ನಾವು ಕೇವಲ ಪ್ರತಿಫಲದ ಆಸೆಯಿಂದ ಪ್ರೇರಿತರಾಗಿ ಕರ್ಮ ಮಾಡಿದರೆ ಅದು ಯೋಗವಾಗುವುದಿಲ್ಲ, ಮಾತ್ರವಲ್ಲದೆ ಪ್ರತಿಫಲವು ಅನಿರ್ದಿಷ್ಟವಾಗಿರುವುದರಿಂದ ಇದು ಕ್ಲೇಶ, ನಿರಾಸೆ ಮತ್ತು ದುಃಖಕ್ಕೆ ಕಾರಣವಾಗಿದೆ. ಈ ಜಗತ್ತು ಅನೇಕ ಸ್ಥೂಲ ಮತ್ತು ಸೂಕ್ಷ್ಮ ಶಕ್ತಿಗಳಿಂದ, ಪಂಚಭೂತ, ರಸ, ಕರ್ಮ, ಗುಣಗಳಿಂದ ಹಾಗೂ ನಿಯಮಗಳಿಂದ ಬೆಳೆದು ಬಂದ ವಿಶಾಲ ಜಾಲ. ಈ ಜಾಲದ ಮಧ್ಯೆ ಪ್ರತಿಯೊಬ್ಬರ ಮೂಲಕವೂ ಅಭಿವ್ಯಕ್ತವಾದ ಕರ್ಮಗಳು ಇವುಗಳೆಲ್ಲದರಿಂದ ಪ್ರಭಾವಿತವಾಗಿವೆ. ಆದ್ದರಿಂದ ಕರ್ಮವು ಕಾಲ, ದೇಶ, ನಿಮಿತ್ತ ಮತ್ತು ಪ್ರಕೃತಿ ಧರ್ಮಕ್ಕೆ ಅನುಗುಣವಾಗಿ ಬೇರೆ ಬೇರೆ ರೀತಿಯ ಪ್ರತಿಫಲವನ್ನು ಕೊಡುವುದು. ಅದಲ್ಲದೆ ಕರ್ತೃವಿನ ಹಿಂದಿನ ಒಟ್ಟಾರೆ ಕರ್ಮಗಳ ಅಗೋಚರವಾದ ನೆಲೆಯ ನಿಶ್ಚಿತವಾದ ಪರಿಣಾಮವನ್ನು ಅವಲಂಬಿಸಿದೆ. ಆದ್ದರಿಂದ ಪ್ರತಿಯೊಂದು ಕರ್ಮಕ್ಕೆ ಕರ್ತೃವು ಅಪೇಕ್ಷಿಸಿದಂತೆ ಫಲವು ಲಭಿಸುವುದು ಅನಿಶ್ಚಯ ಮತ್ತು ಅವಾಸ್ತವಿಕ. ಗೀತೆಯಲ್ಲಿ ಇದನ್ನೇ '**ಗಹನಾ ಕರ್ಮಣೋ ಗತಿಃ**' ಎಂದು ಹೇಳಿದೆ. ಅಂದರೆ ಕರ್ಮ ಮತ್ತು ಕರ್ಮಫಲಗಳ ರೀತಿ, ನೀತಿಗಳು ಮತ್ತು ಅದರ ಪ್ರತಿಸ್ಪಂದನ ವಿಭಿನ್ನ ಪರಿಸ್ಥಿತಿಗಳ ಮೇಲೆ ಅವಲಂಬಿಸಿದೆ. ಕರ್ಮಗಳ ಕಾರ್ಯಕಾರಣ ಸಂಬಂಧ ಅತಿ ಸೂಕ್ಷ್ಮ, ಕ್ಲಿಷ್ಟ ಮತ್ತು ಅನಿರ್ದಿಷ್ಟವಾಗಿರುವುದು. ಆದ್ದರಿಂದ ಕರ್ಮಗಳನ್ನು ಫಲಾಪೇಕ್ಷೆ ಇಟ್ಟುಕೊಳ್ಳದೆ, ಕರ್ಮಗಳನ್ನು ಪರಿಪೂರ್ಣವಾಗಿ, ನಿಃಸ್ವಾರ್ಥಭಾವದಿಂದ ಮಾಡುವುದೇ ಸೂಕ್ತವೆಂಬುದು ಶ್ರೀಕೃಷ್ಣನ ಬೋಧನೆ.

ಕರ್ಮಫಲವನ್ನು ಭಗವಂತನಿಗೆ ಸಮರ್ಪಿಸಿ, ಕರ್ತೃತ್ವ ಭಾವವನ್ನು ತ್ಯಜಿಸಿದಾಗ, ಭಗವಂತನೇ ಕರ್ತೃ ಎಂಬ ಸತ್ಯವು ಗೋಚರವಾಗುತ್ತದೆ ಮತ್ತೆ ಮನಸ್ಸು ಅನವಶ್ಯಕ ಚಿತ್ತವೃತ್ತಿಗಳಿಂದ ಕದಡಿಹೋಗದೆ, ಶಾಂತವಾಗುವುದು ಮತ್ತು ಏಕಾಗ್ರಗೊಳ್ಳುವುದು.

### ೨. ಯೌಗಿಕ ಕುಶಲತೆಯಿಂದ ಕರ್ಮ ಮಾಡು

**'ಯೋಗಃ ಕರ್ಮಸು ಕೌಶಲಂ ।'** *(ಗೀತೆ, ೨.೫೦)*

ಕೌಶಲ್ಯದಿಂದ ಕೆಲಸವನ್ನು ಮಾಡುವುದು ಯೋಗ ಎಂಬುದು ಗೀತೆಯಲ್ಲಿ ಕರ್ಮದ ಬಗ್ಗೆ ನಾವು ಕಂಡುಕೊಳ್ಳಬಹುದಾದ ಮತ್ತೊಂದು ಸ್ಪಷ್ಟ ಮಾರ್ಗದರ್ಶನ. ಇಲ್ಲಿ ಕೌಶಲ್ಯ ಅಂದರೆ ಕೆಲಸವನ್ನು ಪ್ರಾವೀಣ್ಯತೆಯಿಂದ ಮಾಡುವುದು ಮಾತ್ರ ಎಂಬುದಲ್ಲ. ಜಗತ್ತಿನಲ್ಲಿ ಸಹಜವಾಗಿ ಕಂಡುಬರುವ ಪಾಪ–ಪುಣ್ಯಗಳಿಗೆ, ಸುಖ–ದುಃಖಗಳಿಗೆ ಅತೀತವಾಗಿರುವ 'ಯೋಗ' ಕ್ಕಾಗಿ,

ಅಂದರೆ ಆತ್ಮಾನುಭೂತಿಗಾಗಿ ಕರ್ಮ ಮಾಡಿದಾಗ ಬುದ್ಧಿಯು ಸಮತ್ವದ ಸ್ಥಿತಿಯಲ್ಲಿರುವುದು. ಇದನ್ನೇ ಕೌಶಲ್ಯ ಎಂದು ಹೇಳಲಾಗಿದೆ. ಕರ್ಮವನ್ನು ಕೌಶಲ್ಯದಿಂದ ಮಾಡುವುದು ಎಂದರೆ ಪಾಪ-ಪುಣ್ಯ, ಸುಖ-ದುಃಖ, ಲಾಭ-ನಷ್ಟಗಳಿಗೆ ಅತೀತವಾದ ಮನಸ್ಥಿತಿಯಲ್ಲಿದ್ದು ಸಮತ್ವದಿಂದ, ಸಮಾಹಿತ ಚಿತ್ತದಿಂದ ಕರ್ಮವನ್ನು ಮಾಡುವುದು. ಈ ಸಮತ್ವವೆಂಬುದು ಆಂತರ್ಯದಲ್ಲಿ ಆತ್ಮಾನುಸಂಧಾನವನ್ನು ಬಯಸಿ ಬಾಹ್ಯಜಗತ್ತಿನಲ್ಲಿ ಪರಿಣಿತಿಯಿಂದ ನಾವು ಕರ್ಮ ಮಾಡುವ ವಿಧಾನವೇ ಆಗಿದೆ. ಈ ರೀತಿಯಾದ ಕೌಶಲ್ಯದಿಂದ ನಮ್ಮ ನಿತ್ಯ ಜೀವನದ ಕೆಲಸಗಳನ್ನು ಮಾಡತಕ್ಕದ್ದು. ಇದರಿಂದ ಕೆಲಸದಲ್ಲಿ ಪರಿಪೂರ್ಣತೆ, ನಿಖರತೆ ಮತ್ತು ಏಕಾಗ್ರತೆ ಹೆಚ್ಚುವುದು.

### ೩. ಯಜ್ಞದೃಷ್ಟಿಯಿಂದ ಕರ್ಮ ಮಾಡುವುದು

**ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮ ಬಂಧನಃ ।** *(ಗೀತೆ, ೩.೯)*

**ಯಜ್ಞ ಎಂಬುದು ಸೃಷ್ಟಿಕರ್ತನು ಮಾಡುವ ವಿಶ್ವ ಯಜ್ಞ-**

ಯಜ್ಞದೃಷ್ಟಿಯಿಂದ ಕೆಲಸಮಾಡಬೇಕು ಎಂಬುದು ಗೀತೆಯ ಮತ್ತೊಂದು ಮುಖ್ಯ ಮಾರ್ಗದರ್ಶನ. ಯಜ್ಞ ಎಂಬುದು ಸೃಷ್ಟಿಕರ್ತನು ಮಾಡುವ ವಿಶ್ವಯಜ್ಞ. ಸೃಷ್ಟಿಯ ಆದಿಯಿಂದ ಯಜ್ಞದ ಮೂಲಕ, ಅಂದರೆ ವಿಶ್ವದ ಪ್ರತಿಯೊಂದು ಕರ್ಮಗಳಲ್ಲಿ, ಆಗು-ಹೋಗುಗಳಲ್ಲಿ, ಇರುವಿಕೆಯಲ್ಲಿ ಭಗವತ್‌ಶಕ್ತಿ ತನ್ನನ್ನೇ ತೊಡಗಿಸಿಕೊಂಡು ಒಂದು ವಿರಾಟ್ ಯಜ್ಞವನ್ನು ನಡೆಸುತ್ತಿದೆ. ಆದ್ದರಿಂದ ಭಗವಂತನನ್ನು ಯಜ್ಞ ಸ್ವರೂಪ ಎಂದು ಕರೆದಿದ್ದಾರೆ. ಅಸ್ತಿತ್ವದಲ್ಲಿರುವ ಚರಾಚರ ವಸ್ತುಗಳು, ಪರಮಾಣುಗಳ ಸ್ತರವು, ಬ್ರಹ್ಮಾಂಡವು ಭಗವಂತನಿಂದ ಶಕ್ತಿ ಪಡೆದು ತಮ್ಮ ತಮ್ಮ ಸ್ಥಾನದಲ್ಲಿದ್ದು, ಚಲನವಲನ ಮತ್ತು ಕರ್ತವ್ಯ-ಕರ್ಮಗಳ ಗತಿಯಲ್ಲಿ ಇರುತ್ತಾ ಈ ಸೃಷ್ಟಿ ಕಾರ್ಯ ನಡೆಸುತ್ತಿವೆ. ಆದ್ದರಿಂದ ಭಗವಂತನೇ ಈ ವಿರಾಟ್ ಕರ್ಮ ಪ್ರಪಂಚದ ಅಧಿಪತಿಯಾದುದರಿಂದ ಅವನಿಗೆ ಕರ್ಮಾಧ್ಯಕ್ಷನೆಂದೂ ಕರೆಯುತ್ತೇವೆ. ಅವನು ಭುವಿಯ ಪ್ರತಿಯೊಂದು ಕಣ-ಕಣದಲ್ಲಿ, ಎಲ್ಲಾ ಚಲನವಲನದಲ್ಲಿ, ಎಲ್ಲದಕ್ಕೂ ಅಸ್ತಿತ್ವ ನೀಡುವ ವಿಭು ಎಂದೂ ಕರೆಯಲ್ಪಡುತ್ತಾನೆ. ಆದ್ದರಿಂದ ಈ ವಿಷಯದ ಬಗ್ಗೆ ನಾವು ತಿಳಿದು ಮಾಡಬೇಕಾಗಿದ್ದೇನೆಂದರೆ ನಾವೆಲ್ಲ ಈ ವಿರಾಟ್ ವಿಶ್ವಯಜ್ಞದ ಅವಿಭಾಜ್ಯ ಅಂಗ ಎಂದು ಅರಿತು, ಕರ್ಮವು ಭಗವಂತನ ಅಭಿವ್ಯಕ್ತಿ ಎಂದು ತಿಳಿದು, ಕರ್ಮದ ಹೇತುವಾದ ಕರ್ಮಫಲದ ಕಡೆಗೆ ಗಮನವಿಡದೆ, ಕರ್ಮಾಧ್ಯಕ್ಷನಾದ ವಿಶ್ವಕರ್ಮನಿಗೋಸ್ಕರ ಸಮತ್ವದಿಂದ ಮತ್ತು ನೈಪುಣ್ಯತೆಯಿಂದ ಕರ್ಮನಿಯಮಾಕನೊಡನೆ ತಾದಾತ್ಮ್ಯವನ್ನು ಹೊಂದಲು, ನಮ್ಮ ಕರ್ಮಗಳನ್ನು ಲೋಕಹಿತದ ದೃಷ್ಟಿಯಿಟ್ಟು ಮಾಡಬೇಕು. ಪ್ರತಿಯೊಂದು ಅಣುವಿನಿಂದ ಪ್ರಾರಂಭಿಸಿ ಎಲ್ಲಾ ಜೀವ-ಜಂತುಗಳು ಸತತವಾಗಿ ಕೊಡುವುದನ್ನು ಕೊಟ್ಟು, ಪಡೆಯುವುದನ್ನು ಪಡೆದು, ಮಾಡಬೇಕಾದುದನ್ನು ನಿಖರವಾಗಿ ಮಾಡುತ್ತಲೇ ಇರುವುದರಿಂದ, ಈ ವಿರಾಟವಾದ ಸೂಕ್ಷ್ಮ ಮತ್ತು ಸ್ಥೂಲ ಪ್ರಪಂಚದ ಯಜ್ಞಚಕ್ರದಲ್ಲಿ ಒಂದಕ್ಕೊಂದು ಪೂರಕ-ಪೋಷಕಗಳಾಗಿ ಹೊಂದಿಕೊಳ್ಳುತ್ತಾ ಈ ವಿಶ್ವಯಜ್ಞದಲ್ಲಿ ತೊಡಗಿವೆ. ಈ ಯಜ್ಞದಲ್ಲಿ ನಾವು ಪೂರ್ಣ ಅರಿವಿನಿಂದ ಮತ್ತು ಸಹಕಾರದಿಂದ ಭಾಗವಹಿಸದೆ ಇದ್ದರೆ, ಈ ವಿರಾಟ್ ಯಜ್ಞಕ್ಕೆ ಧಕ್ಕೆ ತರುವ ಅಥವಾ ಬಾಧಕವಾದ ನಮ್ಮ ಪ್ರವೃತ್ತಿಗಳಿಂದ ನಾವು ಬಂಧನಕ್ಕೆ ಒಳಗಾಗುತ್ತೇವೆ. ಆದ್ದರಿಂದಲೇ ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ – '**ಯಜ್ಞಾರ್ಥಾತ್ ಕರ್ಮಣೋ ಅನ್ಯತ್ರ ಲೋಕೋಽಯಂ ಕರ್ಮಬಂಧನಃ**' ಅಂದರೆ ಪ್ರತಿಯೊಂದು ಜೀವಿಯು, ಪ್ರತಿ ಕರ್ಮವು ಈ ಯಜ್ಞ ಚಕ್ರದ ಒಂದು ಭಾಗ. ಅದರಲ್ಲಿ ಪರಿಪೂರ್ಣವಾಗಿ ಭಾಗವಹಿಸುವುದು ಎಂಬುದು ದೈವೀ ಆಜ್ಞೆ ಮತ್ತು ಜೀವಧರ್ಮ. ನಮ್ಮ ಕರ್ತವ್ಯ ಕರ್ಮಗಳನ್ನು ಯೋಗ್ಯ ರೀತಿಯಲ್ಲಿ ಮಾಡುವುದರ ಮೂಲಕ ಈ ದೈವೀ ಯಜ್ಞದಲ್ಲಿ ಭಾಗವಹಿಸುತ್ತಾ ಇದ್ದೇವೆ ಎಂಬ ಅರಿವನ್ನು ಸದಾ ಧರಿಸುವುದು ಮುಖ್ಯ. ನಾವು ಕರ್ಮಫಲವನ್ನು ಲಕ್ಷಿಸದೆ, ಅದಕ್ಕೆ ಆಸೆಪಡದೆ ಕರ್ಮವನ್ನು ಪರಿಪೂರ್ಣತೆಯಿಂದ ಕರ್ತವ್ಯ ದೃಷ್ಟಿಯಿಂದ ಮತ್ತು ಯಜ್ಞ ದೃಷ್ಟಿಯಿಂದ ಮಾಡಲು ಈ ಅರಿವು ಪ್ರೇರೇಪಿಸುವುದು. ಈ ವಿಶ್ವ ಯಜ್ಞ ಉಪಾಸನೆಯಿಂದ ನಮ್ಮ ಕರ್ಮವು ಭಗವತ್ ಯಜ್ಞದಲ್ಲಿ ಅರ್ಪಿತವಾಗುತ್ತವೆ. ಈ ಭಾವ ನಮ್ಮನ್ನು ಕರ್ಮ ಬಂಧನದಿಂದ ಮುಕ್ತನನ್ನಾಗಿಸುವುದು. ಈ ವಿರಾಟ್ ಯಜ್ಞದ ಸಹಭಾಗಿತ್ವವು ನಮಗೆ ಸಂತೃಪ್ತಿ ಮತ್ತು ಆನಂದವನ್ನು ನೀಡುವುದು.

ತನ್ನನ್ನೇ ಈ ದೇವಯಜ್ಞದ ಮೂಲಕ ವಿಶ್ವದ ಸಕಲ ಕರ್ಮಗಳಲ್ಲಿ ಭಗವಂತನು ತೊಡಗಿಸಿಕೊಂಡಿದ್ದಾನೆ ಎಂಬ ಅರಿವು ನಮಗೆ ಸ್ಪಷ್ಟವಾಗಿ ತಿಳಿದಷ್ಟೂ ನಮ್ಮ ಮನಸ್ಸು ಕರ್ತೃತ್ವದ ಭಾರವನ್ನು ಕಳಚಿಕೊಂಡು ಹಗುರವಾಗುವುದು. ದೈವೀ ವಿರಾಟ್ ಶಕ್ತಿಯು ಈ ಸೃಷ್ಟಿಯ ಆತ್ಯಂತಿಕ ಆಧಾರವಾಗಿ ಎಲ್ಲವನ್ನೂ ಮಾಡುವುದು, ನೋಡುವುದು ಎಂದು ಅರಿವಾದಾಗ ಮನಸ್ಸು ತನ್ನ ಕರ್ತೃತ್ವ ಅಭಿಮಾನವನ್ನು ಬಿಟ್ಟು, ನಮ್ಮ ಅಹಂಭಾವದ ಹಿಂದಿರುವ ಆತ್ಮಚೈತನ್ಯದೊಡನೆ ತಾದಾತ್ಮ್ಯ ಹೊಂದುವುದು. ಅದು ಹೇಗೆಂದರೆ: ಭಗವಾನ್ ರಮಣ ಮಹರ್ಷಿಯವರು ತಿಳಿಸಿದಂತೆ ಒಬ್ಬ ರೈಲಿನಲ್ಲಿ ಪ್ರಯಾಣ ಮಾಡುತ್ತಿರುವ ಪ್ರಯಾಣಿಕ ತನ್ನ ಗಂಟು-ಮೂಟೆಯನ್ನು ತನ್ನ ತಲೆಯ ಮೇಲೆಯೇ ಹೊತ್ತುಕೊಳ್ಳದೆ, ಅದರ ಭಾರವನ್ನು ಅನವಶ್ಯಕವಾಗಿ ತನ್ನ ಶರೀರದ ಮೇಲೆ ಹಾಕದೆ, ಎಲ್ಲರನ್ನೂ ಮತ್ತು ಎಲ್ಲವನ್ನು ಹೊತ್ತುಕೊಂಡು ಚಲಿಸುತ್ತಿರುವ ರೈಲಿನ ಮೇಲೆ ಆ ಮೂಟೆಯನ್ನು ಸ್ಥಳಾಂತರಿಸಿ ಇಟ್ಟು, ತಾನು ಹಗುರವಾಗಿದ್ದು ಆರಾಮದಿಂದ ಪ್ರಯಾಣ ಮಾಡಿದಂತೆ.

## ೪. ಭಗವದರ್ಪಣ ಬುದ್ಧಿಯಿಂದ ಕರ್ಮ ಮಾಡುವುದು

**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್।**
**ಯತ್ ತಪಸ್ಯಸಿ ಕೌಂತೇಯ ತತ್ ಕುರುಷ್ವ ಮದರ್ಪಣಂ ॥**

*(ಗೀತೆ, ೯.೨೭)*

ಈ ಮೇಲಿನ ಗೀತೆಯ ಶ್ಲೋಕದಲ್ಲಿ ತಿಳಿಸಿದಂತೆ ನಾವು ಮಾಡಿದ ಕರ್ಮವನ್ನು ಭಕ್ತನು ಭಗವದರ್ಪಣ ಬುದ್ಧಿಯಿಂದ ಮಾಡಬೇಕು. ಆದ್ದರಿಂದ ಗೀತಾಚಾರ್ಯ ಹೇಳುತ್ತಾನೆ, '**ಯತ್ಕರೋಷಿ**' – ಏನು ಮಾಡುತ್ತೀಯೋ, '**ಯದಶ್ನಾಸಿ**' – ಏನು ತಿನ್ನುತ್ತೀಯೋ, '**ಯಜ್ಜುಹೋಷಿ**' – ಯಾವುದನ್ನು ಹೋಮ ಮಾಡುತ್ತೀಯೊ, '**ಯತ್ ದದಾಸಿ**' ಯಾವುದನ್ನು ದಾನ ಮಾಡುತ್ತೀಯೊ, '**ಯತ್ ತಪಸ್ಯಸಿ**' – '**ತತ್ ಕುರುಷ್ವ ಮದರ್ಪಣಂ**'– ಯಾವ ತಪಸ್ಸನ್ನು ಮಾಡುತ್ತೀಯೋ ಅದನ್ನು ನನಗೆ ಸಮರ್ಪಿಸು. ಆದ್ದರಿಂದ ನಮ್ಮ ಜೀವನದ ಸಕಲ ಕರ್ಮಗಳನ್ನು ಭಗವತ್ ಪ್ರೀತ್ಯರ್ಥವಾಗಿ ಪರಿಪೂರ್ಣತೆಯಿಂದ ಅವನ ಪೂಜೆ ಎಂದು ತಿಳಿದು ಮಾಡಬೇಕು.

## ೫. ಸಮತ್ವದಿಂದ ಕರ್ಮ ಮಾಡು

'**ಸಮತ್ವಂ ಯೋಗ ಉಚ್ಯತೇ**' *(ಗೀತೆ, ೨.೪೮)* – ಸಮತ್ವವು ಯೋಗವೆಂದು ಕರೆಯಲ್ಪಟ್ಟಿದೆ. ಸಮತ್ವದಿಂದ ಕೆಲಸ ಮಾಡಿದಲ್ಲಿ ಅದು ಯೋಗವಾಗಿ ಪರಿಣಮಿಸುವುದು. ಇಲ್ಲಿ ಸಮತ್ವವೆಂದರೆ ಮಾನಸಿಕ ಸಂತುಲತೆ. ನಮ್ಮ ಎಲ್ಲಾ ಕೆಲಸಗಳನ್ನು ಅರಿವಿನಿಂದ, ಕ್ಲೇಶರಹಿತನಾಗಿ ಸ್ಥಿರಬುದ್ಧಿಯಿಂದ ಮಾಡುವುದು ಎಂದರ್ಥ.

ಈ ಸಮತ್ವದ ಸ್ಥಿತಿಯಲ್ಲಿ ನಮ್ಮ ಮನಸ್ಸನ್ನು ಸ್ವಾರ್ಥಕ್ಕೆ ಒಳಪಡಿಸದೆ, ದೃಢವಾದ, ಚಾಂಚಲ್ಯರಹಿತ ಸ್ಥಿರ ಮನಸ್ಸಿನಿಂದ, ಸಮತೋಲನದಿಂದ ನಮ್ಮ ಕರ್ಮವನ್ನು ಮಾಡಲು ನಮಗೆ ಸಾಧ್ಯವಾಗುವುದು. ಆದ್ದರಿಂದ ಯಾರು ಸಮತ್ವದಿಂದ ಅಂದರೆ ಲಾಭದಿಂದ ಹಿಗ್ಗದೆ, ನಷ್ಟದಿಂದ ಕುಗ್ಗದೆ, ಏಕಭಾವದಿಂದ ಶಾಂತ ಭಾವದಿಂದ ಕರ್ಮ ಮಾಡುತ್ತಾರೋ ಅವರ ಮನಸ್ಸು ಸಹಜವಾಗಿ ಭಗವಂತನಲ್ಲಿ ನೆಲೆ ನಿಂತು ಆನಂದವನ್ನು ಸವಿಯುತ್ತದೆ. ಯಾವುದೇ ರೀತಿಯಲ್ಲಿ ಕರ್ಮಬಂಧನಕ್ಕೆ ಬಲಿಯಾಗುವುದಿಲ್ಲ.

## ೬. ಯೋಗದೃಷ್ಟಿಯಿಂದ ಕರ್ಮ ಮಾಡು

'**ಯೋಗಸ್ಥಃ ಕುರು ಕರ್ಮಾಣಿ**' *(ಗೀತೆ, ೨.೪೮)* – ಯೋಗದ ಸ್ಥಿತಿಯಲ್ಲಿ ಇದ್ದುಕೊಂಡು ಕರ್ಮ ಮಾಡಬೇಕು.

ಈ ರೀತಿ ಸಮತ್ವದಿಂದ, ಯಜ್ಞದೃಷ್ಟಿಯಿಂದ, ಭಗವದರ್ಪಣ ಬುದ್ಧಿಯಿಂದ ಕರ್ಮ ಮಾಡುವಾಗ ಜೀವಾತ್ಮ ಪರಮಾತ್ಮನನ್ನು ಬಯಸಲು ಮುಕ್ತನಾಗುತ್ತಾನೆ. ಇದರ ಪರಿಣಾಮವಾಗಿ ಚಿತ್ತವೃತ್ತಿಗಳು ಸಂಯಮಿಸಲ್ಪಟ್ಟು ಮನಸ್ಸು ಏಕಾಗ್ರವಾಗಿ, ಅಂತರ್ಮುಖಗೊಂಡು ಯೋಗದೃಷ್ಟಿಯನ್ನು ಹೊಂದುತ್ತದೆ. ತನ್ಮೂಲಕ ಸಕಲ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡುತ್ತಾ ಒಬ್ಬ ಸಾಧಕನು ಭಗವಂತನೇ ಕರ್ತೃವೆಂದು ತಿಳಿದು, ಶ್ರದ್ಧೆಯಿಂದ ಭಗವಂತನನ್ನು ಬಯಸುತ್ತಾ, ಯೋಗಾರೂಢನಾಗಿ ಕರ್ತವ್ಯಗಳನ್ನು ಮಾಡುತ್ತಾ ಅಂತರ್ಯದಲ್ಲಿರುವ ಆತ್ಮಸ್ವರೂಪನಾಗಿ ಕಂಗೊಳಿಸುತ್ತಿರುವ ಭಗವಂತನಲ್ಲಿ ತಾದಾತ್ಮ್ಯವನ್ನು ಹೊಂದುತ್ತಾನೆ.

## ೭. ಸಾಕ್ಷೀಭಾವದಿಂದ ಕರ್ಮವನ್ನು ಮಾಡು

ಸಾಕ್ಷೀಭಾವದಿಂದ ಕರ್ಮ ಮಾಡುವುದೆಂದರೆ ಈ ಹಿಂದೆ ಹೇಳಿದಂತೆ ವಿರಾಟ್‌ಪುರುಷನಾದ ಭಗವಂತನು ಅವನ ಪ್ರಕೃತಿ ಶಕ್ತಿಯ ಮೂಲಕ ಸಕಲ ಕರ್ಮಗಳನ್ನೂ ಮಾಡುತ್ತಿದ್ದಾನೆ ಎಂದು ಸಾಕ್ಷಿಯಾಗಿ ವೀಕ್ಷಿಸಿ ನಾವು ಕರ್ತೃತ್ವಭಾವವನ್ನು ಕ್ರಮೇಣ ತೊರೆದು ಪೂರ್ಣವಾಗಿ ತ್ಯಾಗ ಮಾಡಿ ಅಂತರ್ಯದ ಸಾಕ್ಷಿಚೈತನ್ಯವಾಗಿರಲು, ವಿವೇಕಬುದ್ಧಿಯನ್ನು ಬಳಸಿ ಅಭ್ಯಾಸ ಮಾಡಬೇಕು. ಆಗ ಗೀತೆಯ ಈ ಕೆಳಗಿನ ಶ್ಲೋಕದಲ್ಲಿ ಶ್ರೀಕೃಷ್ಣನು ಹೇಳಿದಂತೆ ಕರ್ಮ ಮಾಡುತ್ತಿರುವಾಗ ಅಕರ್ಮಿಯಾಗಿ ಸಾಕ್ಷೀಭಾವದಲ್ಲಿದ್ದುಕೊಂಡು ನಮ್ಮ ಕರ್ಮಗಳನ್ನೇ ನಾವು ಸೂಕ್ಷ್ಮವಾಗಿ ವೀಕ್ಷಿಸಬಹುದು. ಆಗ ಮಾತ್ರ ನಾವು ಕರ್ಮದ ಮೂರು ಘಟಕಗಳಾದ ಕರ್ತೃ, ಕರ್ಮ ಮತ್ತು ಕರ್ಮಫಲಗಳನ್ನು ವಿಂಗಡಿಸಿ ನೋಡಿ ನಿಜವಾದ ಕರ್ತೃ, ಅಹಂಭಾವ ಅಂದರೆ ದೇಹಾತ್ಮ ಬುದ್ಧಿಯ ನಾನು, ನಾನಲ್ಲವೆಂದು ತಿಳಿದು, ಮತ್ತು ನಮ್ಮ ಅಹಂಭಾವದ ಆಧಾರವಾದ ನಾನು ಎಂಬ ಸೂಕ್ಷ್ಮವಾದ ಸ್ಫುರಣದ ಮೂಲವಾದ ಆತ್ಮಚೈತನ್ಯ ಎಂದು ಅರಿಯುತ್ತೇವೆ. ಅಂತೆಯೇ, ಅದರೊಡನೆ ಸಹಜವಾಗಿ ತಾದಾತ್ಮ್ಯವನ್ನು ಹೊಂದುತ್ತೇವೆ.

**ಕರ್ಮಣ್ಯಕರ್ಮ ಯಃ ಪಶ್ಯೇತ್ ಅಕರ್ಮಣಿ ಚ ಕರ್ಮ ಯಃ ।**
**ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥**

*(ಗೀತೆ, ೪.೧೮)*

'ಯಾವನು ಕರ್ಮವನ್ನು ಅಕರ್ಮದಲ್ಲಿ, ಅಕರ್ಮವನ್ನು ಕರ್ಮದಲ್ಲಿ ನೋಡುತ್ತಾನೆಯೋ ಅವನು ಮನುಷ್ಯರಲ್ಲಿ ಬುದ್ಧಿವಂತನು.'

ತನ್ನನ್ನು, ಅಂದರೆ ನಾನು ಎಂಬ ಭಾವವು ಆತ್ಮಚೈತನ್ಯದ ಅರಿವಿನಿಂದ ಪರಿಪ್ಲುತವಾದಾಗ, ಅದರೊಡನೆ ತಾದಾತ್ಮ್ಯ ಹೊಂದಿದ ಈ ಸ್ಥಿತಿಯಿಂದ ಸಕಲ ಕರ್ಮಗಳನ್ನು ಸಾಕ್ಷಿಭಾವದಿಂದ ವೀಕ್ಷಿಸಬೇಕು ಎಂದು ಗೀತೆ ಜ್ಞಾನಮಾರ್ಗದ ಸಾಧನೆ ಮಾಡುವವರಿಗೆ ಪದೇ ಪದೇ ತಿಳಿಸುತ್ತದೆ. ಅನಾಸಕ್ತಿಯಿಂದ ಕರ್ಮಗಳನ್ನು ವೀಕ್ಷಿಸುವಾಗ ಬುದ್ಧಿಯು ಚಿತ್ತದ ತಾದಾತ್ಮ್ಯದಿಂದ ಬೇರ್ಪಟ್ಟು ನಿಜವಾದ ವೀಕ್ಷಕನಾದ, ಸಾಕ್ಷಿ ಚೈತನ್ಯವಾದ ಆತ್ಮಚೈತನ್ಯದೊಂದಿಗೆ ತಾದಾತ್ಮ್ಯ ಹೊಂದುವುದು. ಮನಸ್ಸನ್ನೂ, ಎಲ್ಲ ಕರ್ಮಗಳನ್ನೂ ಹಾಗೂ ಸ್ವಂತ ಮನಸ್ಸಿನಲ್ಲಿ ಉದ್ಭವವಾಗುವ ಆಲೋಚನೆಗಳನ್ನೂ ಗಮನಿಸುತ್ತಾ ಇದ್ದರೆ, ಕ್ರಮೇಣ ಚಿತ್ತವು ದೃಢವಾಗಿ, ಶಾಂತವಾಗುವುದು ಹಾಗೂ ಅನವಶ್ಯಕ ಚಂಚಲ ವೃತ್ತಿಗಳು ಸ್ಥಗಿತವಾಗಿ ಅಂತರ್ಮುಖತ್ವವು ಪ್ರಾಪ್ತವಾಗುವುದು. ಇದರಿಂದ ಸಾಧಕರು ಧ್ಯಾನದಲ್ಲಿ ಬೇಗ ಮುಂದುವರಿಯಬಹುದು.

## ೮. ಅಧ್ಯಾತ್ಮ ಚೇತಸ್ಸಿನಿಂದ (ಚಿತ್ತದಿಂದ) ಕರ್ಮ ಮಾಡು

**ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।**
**ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥**

*(ಗೀತೆ, ೩.೩೦)*

'ಅಧ್ಯಾತ್ಮಚಿತ್ತದ ಮೂಲಕ ಸರ್ವ ಕರ್ಮಗಳನ್ನೂ ನನ್ನಲ್ಲಿ ಅರ್ಪಿಸಿ, ಆಸೆ-ಮಮತೆ-ತಾಪ ಇವುಗಳಿಲ್ಲದವನಾಗಿ ಯುದ್ಧವನ್ನು ಮಾಡು.'

'ಅಧ್ಯಾತ್ಮ ಚೇತಸಾ' ಅಂದರೆ ದೈವಪ್ರಜ್ಞೆ. ಆಂತರ್ಯದಲ್ಲಿ ಆತ್ಮಭಾವದಲ್ಲಿ ನೆಲೆನಿಂತ ಬುದ್ಧಿಯಿರುವ ಮನಸ್ಸಿನಿಂದ ನಾವು ನಮ್ಮ ಕರ್ಮಗಳನ್ನು ಮಾಡಿದರೆ, ಕರ್ಮಫಲಾಪೇಕ್ಷೆಯಿಲ್ಲದೆ ಭಗವತ್ ಪ್ರೀತ್ಯರ್ಥವಾಗಿಮಾಡಬಹುದು. ದೈವ ಪ್ರಜ್ಞೆಯಿಂದ, ಭಗವಂತನಿಗಾಗಿ ಕರ್ಮವನ್ನು ವಿವೇಕಬುದ್ಧಿಯನ್ನು ಬಳಸಿ ಮಾಡಿದರೆ ಅಂತಹ ಕರ್ಮಗಳು ನಮ್ಮನ್ನು ಸಂಸಾರದಲ್ಲಿ ಬಂಧಿಸುವುದಿಲ್ಲ. ಮಾತ್ರವಲ್ಲದೆ ಅವು ಬಂಧನಗಳನ್ನು ಖಂಡಿಸಿ ಸೃಷ್ಟಿಕರ್ತನಾದ ದೇವರೊಡನೆ ಭಾವೈಕ್ಯ ಹೊಂದಿ ದೈವಪ್ರಜ್ಞೆಯನ್ನು ಹೃದಯದಲ್ಲಿ ತಾಳಿ ಚಿತ್ತವು ಆತ್ಮಪ್ರಕಾಶದಿಂದ ಬೆಳಗುವಂತೆ ಮಾಡುವುದು. ನಮ್ಮ ಚಿತ್ತವೃತ್ತಿ ಆತ್ಮಚೈತನ್ಯದಿಂದ ಬೆಳಗಿ ಪ್ರಜ್ಞಾವೃತ್ತಿಯಾಗುವುದು. ಅಹಂಭಾವದ ಬದಲಾಗಿ ಸದಾ ಆತ್ಮಭಾವದಲ್ಲಿದ್ದು ನಮ್ಮ ಕರ್ತವ್ಯಗಳನ್ನು ಮಾಡಲು ಸಾಧ್ಯವಾಗುವುದು.

## ೯. ಲೋಕಸಂಗ್ರಹಕ್ಕಾಗಿ ಕರ್ಮ ಮಾಡು

**ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।**
**ಕುರ್ಯಾದ್ ವಿದ್ವಾಂಸ್ತಥಾಸಕ್ತಃ ಚಿಕೀರ್ಷುಃ ಲೋಕಸಂಗ್ರಹಮ್ ॥**

*(ಗೀತೆ, ೩.೨೫)*

'ಕರ್ಮದಲ್ಲಿ ಆಸಕ್ತರಾದ ಅಜ್ಞಾನಿಗಳು ಹೇಗೆ ಕರ್ಮವನ್ನು ಮಾಡುತ್ತಾರೆಯೋ ಹಾಗೆಯೇ ಅಸಕ್ತನಾದ ಜ್ಞಾನಿಯು ಲೋಕ ಸಂಗ್ರಹವನ್ನು ಇಚ್ಛಿಸುತ್ತಾ ಕರ್ಮವನ್ನು ಮಾಡಬೇಕು.'

ಈ ಪ್ರಪಂಚದಲ್ಲಿ ಎಲ್ಲಾ ಕರ್ಮಗಳ ನಿಜವಾದ ಉದ್ದೇಶ ಲೋಕಸಂಗ್ರಹ.

ಇದಕ್ಕಿಂತ ಸ್ವಲ್ಪ ಹಿಂದೆ ಅದೇ ಅಧ್ಯಾಯದಲ್ಲಿ ಶ್ರೀಕೃಷ್ಣ ಹೇಳುತ್ತಾನೆ:

**ಕರ್ಮಣೈವ ಹಿ ಸಂಸಿದ್ಧಿಮ್ ಆಸ್ಥಿತಾ ಜನಕಾದಯಃ ।**
**ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥**

*(ಗೀತೆ, ೩.೨೦)*

'ಜನಕರಾಜ ಮತ್ತು ಅನೇಕ ಜ್ಞಾನಿಗಳು ಕರ್ಮಾನುಷ್ಠಾನವನ್ನು ಯೋಗದೃಷ್ಟಿಯಿಂದ ಮಾಡಿ ಸಿದ್ಧಿಯನ್ನು ಪಡೆದರು. ಆದ್ದರಿಂದ ಲೋಕಸಂಗ್ರಹದೃಷ್ಟಿಯಿಂದಾದರೂ ಕರ್ಮವನ್ನು ಮಾಡುವುದು ಯೋಗ್ಯ.'

ಅಂದರೆ ನಮ್ಮ ಕರ್ಮಗಳನ್ನು ಸರ್ವಜನಹಿತ ಮತ್ತು ಭಗವತ್‌ಸೃಷ್ಟಿಯ ಹಿತ ಹಾಗೂ ಅದರ ನಿರ್ವಹಣೆಗೆ ಪೂರಕವಾಗುವಂತೆ ಮಾಡಬೇಕು. ಇನ್ನೊಬ್ಬರಿಗೆ ದುಃಖ ಕೊಡುವ, ಪರಿಸರಕ್ಕೆ ಹಾನಿ ತಂದೊಡ್ಡುವ ಕುಕರ್ಮವನ್ನು ಮಾಡಬಾರದು. ಧರ್ಮನಿಷ್ಠರಾಗಿದ್ದು ಮಾಡಿದ ನಮ್ಮ ಕರ್ಮಗಳು ಎಲ್ಲರ ಒಳಿತನ್ನು ಸಾಧಿಸುವಂತಾಗಬೇಕು.

ನಿತ್ಯಜೀವನದ ವ್ಯಾವಹಾರಿಕ ಕರ್ಮಗಳನ್ನು ಮತ್ತು ಆಧ್ಯಾತ್ಮಿಕ ಸಾಧನೆಯನ್ನು ಒಗ್ಗೂಡಿಸುವುದೇ ಧರ್ಮಜೀವನದ ಆಧ್ಯಾತ್ಮಿಕ ಒಳ ಮರ್ಮ. ಆದ್ದರಿಂದ ದೈವಪ್ರಜ್ಞೆಯ ಪ್ರಾಪ್ತಿಗೆ ವ್ಯಾಕುಲತೆಯಿಂದ ಪ್ರಾರ್ಥಿಸುತ್ತಾ, ನಾಮಸ್ಮರಣೆಯಿಂದ ಚಿತ್ತವೃತ್ತಿಗಳನ್ನು ಸಂಯಮಿಸಿ ಬೆಳಗಿಸುತ್ತಾ ಸಕಲ ಕರ್ಮಗಳನ್ನು ಈಶ್ವರಾರ್ಪಣಾಭಾವದಿಂದ, ಯಜ್ಞದೃಷ್ಟಿಯಿಂದ ಮಾಡಲು ಪ್ರಯತ್ನಿಸಿದರೆ ನಮ್ಮ ಜೀವನವು **'ದೈವಪ್ರಜ್ಞಾ-ವ್ಯಾಕುಲ-ಜಪ-ಧ್ಯಾನ-ಕರ್ಮಯಜ್ಞ'** ಗಳಿಂದ ಒಡಗೂಡಿದ ಒಂದು ಯೋಗ ಜೀವನವಾಗಿ ಮಾರ್ಪಡುವುದು. ಶ್ರೀಕೃಷ್ಣನು ಗೀತೆಯಲ್ಲಿ ಕರ್ಮಯೋಗವನ್ನಾಚರಿಸಿ ಯೋಗಿಯಾಗುವುದು ಶ್ರೇಷ್ಠ ಎಂದು ತಿಳಿಸಿರುವುದನ್ನು ಇಲ್ಲಿ ನಾವು ಗಮನಿಸಬೇಕು. ಯಾಕೆಂದರೆ ಈ ಭುವಿಯು ಕರ್ಮಭೂಮಿ. ಇಲ್ಲಿಯ ಸಕಲ ಜೀವಿಗಳ ಜೀವನವು ಕರ್ಮನಿರತ ಮತ್ತು ಕರ್ಮಾಧಾರಿತ. ಆದುದರಿಂದ ಅನಿವಾರ್ಯವಾಗಿ ಮಾಡಬೇಕಾಗಿದ್ದ ಎಲ್ಲಾ ಕರ್ಮಗಳನ್ನು ಕರ್ಮಯೋಗವನ್ನಾಗಿ ಪರಿವರ್ತಿಸಲು ಅಭ್ಯಾಸಮಾಡುವುದು ಆವಶ್ಯಕ. ಹೀಗೆ ಎಲ್ಲರನ್ನೂ ಯೋಗಮಾರ್ಗದೆಡೆಗೆ ಕರೆದೊಯ್ಯಲು ಕರ್ಮಯೋಗ ಅನಿವಾರ್ಯ. ಆದ್ದರಿಂದ ಶ್ರೀಕೃಷ್ಣನು ಕರ್ಮಯೋಗಿಯಾಗುವುದು ಶ್ರೇಷ್ಠ ಎಂದು ಉದ್ಘೋಷಿಸಿದ್ದಾನೆ. ಮುಂದೆ ಗೀತೆಯ ಹದಿನೆಂಟನೆಯ ಅಧ್ಯಾಯದಲ್ಲಿ ಆತ್ಯಂತಿಕವಾಗಿ ಸಿದ್ಧಿಯನ್ನು ಪಡೆಯಲು ಸ್ವಕರ್ಮಗಳನ್ನು ಭಗವಂತನಿಗೆ ಅರ್ಪಿಸಿ ಸಿದ್ಧಿಯನ್ನು ಪಡೆಯಬಹುದು ಎಂಬ ಆಶ್ವಾಸನೆ ಕೊಟ್ಟಿದ್ದಾನೆ:

**ಯತಃ ಪ್ರವೃತ್ತಿಃ ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥**

*(ಗೀತೆ, ೧೮.೪೬)*

'ಯಾರ ದೆಸೆಯಿಂದ ಜೀವಿಗಳಲ್ಲಿ ಪ್ರವೃತ್ತಿಯು ಉಂಟಾಗುವುದೋ, ಯಾರಿಂದ ಈ ಜಗತ್ತೆಲ್ಲಾ ವ್ಯಾಪ್ತವಾಗಿರುವುದೋ, ಅವನನ್ನು ಸ್ವಕರ್ಮದಿಂದ ಆರಾಧಿಸಿ ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ.'

ಆದ್ದರಿಂದ ಅಧ್ಯಾತ್ಮಜೀವನವನ್ನು ಸತತವಾಗಿ ಅಭ್ಯಾಸ ಮಾಡಲು ಭಗವಂತನಲ್ಲಿ ನಿತ್ಯಯುಕ್ತರಾಗಿರಲು ನಾವು ನಮ್ಮನ್ನು ಆಧ್ಯಾತ್ಮಿಕ ಸಾಧನೆಗಳಾದ ಧ್ಯಾನ, ಜಪ, ಪೂಜೆ ಪಾರಾಯಣಗಳಿಗೆ ಸೀಮಿತಗೊಳಿಸದೆ, ಪ್ರತಿಯೊಂದು ಕ್ಷಣದಲ್ಲಿ, ನಿತ್ಯ ಜೀವನದ

ಪ್ರತಿಯೊಂದು ಸಾಮಾನ್ಯ ಕೆಲಸಗಳ ಮೂಲಕ ಭಗವಂತ ನೊಬ್ಬ ನನ್ನೇ ನಿಜವಾಗಿ ಬಯಸಿ, ಅವುಗಳನ್ನೆಲ್ಲಾ ಸತತವಾಗಿ ಅವನಿಗೆ ಅರ್ಪಿಸಬೇಕು. ಭಗಿನಿ ನಿವೇದಿತಾರವರು ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ ಮುನ್ನುಡಿಯಲ್ಲಿ ಸೂಕ್ತವಾಗಿ ಬರೆದಿರುವಂತೆ, 'To labour is to pray', ಕೆಲಸವೆಲ್ಲವನ್ನೂ ಭಗವಂತನ ಆರಾಧನೆ ಮತ್ತು ಅವನನ್ನು ಬಯಸಿ ಪ್ರಾರ್ಥಿಸುವ ಕರ್ಮ ಯೋಗವನ್ನಾಗಿ ಮಾಡಬೇಕು. ವ್ಯವಹಾರವೆಲ್ಲವೂ ಆಗ ಪಾರ ಮಾರ್ಥಿಕವಾಗಿ ಪರಿವರ್ತನೆಗೊಳ್ಳುವುದು. ನಮ್ಮ ಜೀವನವೇ ಯೋಗವಾಗುವುದು.

ನಾವು ಜೀವನದಲ್ಲಿ ಬೇರೆ ಬೇರೆ ಸನ್ನಿವೇಶಗಳಲ್ಲಿ ಎದುರಿಸ ಬಹುದಾದ ಸವಾಲುಗಳನ್ನು ಯೋಗ್ಯ ರೀತಿಯಲ್ಲಿ ನಿರ್ವಹಿ ಸಲು ಬೇಕಾದ ಜ್ಞಾನರಾಶಿಯನ್ನು ಮತ್ತು ಸೂಕ್ತ ಮಾರ್ಗದರ್ಶನ ವನ್ನು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ನೀಡಿದ್ದಾನೆ. ನಿತ್ಯಜೀವನದಲ್ಲಿ ಕರ್ಮದ ನಿರ್ವಹಣೆಯನ್ನು ಯೋಗ್ಯರೀತಿ ಯಲ್ಲಿ ಮಾಡುವ ಕುರಿತು ಗೀತೆಯ ಕರ್ಮಯೋಗದ ಅಧ್ಯಾಯ ದಲ್ಲಿ ಮಾತ್ರವಲ್ಲದೆ, ಇನ್ನಿತರ ಅಧ್ಯಾಯಗಳಲ್ಲಿ ಕೂಡ ಶ್ರೀ ಕೃಷ್ಣನು ಅರ್ಜುನನ ಪ್ರಶ್ನೆಗಳಿಗೆ ಅನುಗುಣವಾಗಿ ಕರ್ಮಗಳ ಒಳಮರ್ಮಗಳನ್ನು ಅಲ್ಲಲ್ಲಿ ವಿವಿಧ ರೀತಿಯಲ್ಲಿ ತಿಳಿಸಿದ್ದನ್ನು ನಾವು ಕಂಡುಕೊಳ್ಳಬಹುದು. ಶ್ರೀಕೃಷ್ಣನು ಗೀತೆಯಲ್ಲಿ ಪ್ರಾರಂಭ ದಿಂದ ಕೊನೆಯವರೆಗೂ ಹೇಳಿದಂತಹ ಈ ಉಕ್ತಿಗಳು ಒಟ್ಟಾರೆ ಕರ್ಮಯೋಗದ ಬಗ್ಗೆ ನಮಗೆ ಆವಶ್ಯಕವಾದ ಎಲ್ಲ ಮಾರ್ಗ ದರ್ಶನವನ್ನು ಸವಿಸ್ತಾರವಾಗಿ, ಪರಿಪೂರ್ಣವಾಗಿ ನೀಡುತ್ತವೆ.

ನಮಗೆ ಉಪಲಬ್ಧವಿರುವ ಹಿಂದೂಧರ್ಮದ ಗ್ರಂಥಗಳಲ್ಲಿ ಕರ್ಮವಿಜ್ಞಾನ ಮತ್ತು ಕರ್ಮಯೋಗವನ್ನು ಕುರಿತು ಗೀತೆಯು ಅಧ್ಯಾತ್ಮ ಮತ್ತು ಧರ್ಮದ ಹಿನ್ನೆಲೆಯಲ್ಲಿ ಪರಿಪೂರ್ಣವಾಗಿ ಹಾಗೂ ಪ್ರಾಯೋಗಿಕವಾಗಿ ಕರ್ಮನಿಯಮ ಹಾಗೂ ಕರ್ಮ ಯೋಗದ ಬಗ್ಗೆ ವಿಶೇಷವಾದ ಬೆಳಕನ್ನು ಚೆಲ್ಲುತ್ತಿರುವುದರಿಂದ ಗೀತೆಯನ್ನು ನಾವು 'ಸಾರ್ವಕಾಲಿಕ ಕರ್ಮಯೋಗ ಮಾರ್ಗ ದರ್ಶಿ'ಎನ್ನಬಹುದು.

ಕುರುಕ್ಷೇತ್ರದ ರಣರಂಗದಲ್ಲಿ ಭೀಕರವಾದ ಕರ್ಮಸಂಗ್ರಾ ಮದ ಮಧ್ಯದಲ್ಲಿಯೇ ಅರ್ಜುನನನ್ನು ಕುರಿತು ಶ್ರೀಕೃಷ್ಣನು ಹೇಳಿರುವ ಬೋಧನೆಗಳ, ಜ್ಞಾನರಾಶಿಯ, ಕರ್ಮರಹಸ್ಯದ ಔಚಿತ್ಯ ಮತ್ತು ಸೂಕ್ಷ್ಮತೆಗಳನ್ನು ಮೊದಲು ಗ್ರಹಿಸಲು ಪ್ರಯ ತ್ನಿಸಬೇಕು. ಶ್ರೀಕೃಷ್ಣನು ಅರ್ಜುನನನ್ನು ಯೋಗ್ಯ ರೀತಿಯಲ್ಲಿ, ತನ್ನ ಪಾಲಿಗೆ ಬಂದ ಯುದ್ಧವೆಂಬ ಕರ್ತವ್ಯದಿಂದ ಖಿನ್ನಮನಸ್ಕ ನಾಗದೆ, ಎದೆಗುಂದದೆ, ಧೈರ್ಯದಿಂದ ಸ್ವಧರ್ಮಕ್ಕೆ ಅನುಗುಣ ವಾಗಿ ಅದನ್ನು ಎದುರಿಸಲು ಸಿದ್ಧನಾಗುವಂತೆ, ಭಗವದ್ಗೀತೆ ಯನ್ನು ಅವನಿಗೆ ಬೋಧಿಸಿದನು. ಸಂಸಾರವೆಂಬ ನಿಬಿಡಾರಣ್ಯ ದಲ್ಲಿ ನಾವು ಸಾಗುತ್ತ, ವಿಭಿನ್ನ ಸನ್ನಿವೇಶಗಳಲ್ಲಿ ನಾವು ಮಾಡ ಬೇಕಾಗಿರುವ ಕರ್ತವ್ಯ ಮತ್ತು ಕರ್ಮಗಳ ಬಗ್ಗೆ ಅನೇಕ ರೀತಿಯ ಜಿಜ್ಞಾಸೆ, ದ್ವಂದ್ವ ಮತ್ತು ಗೊಂದಲಗಳನ್ನು ಎದುರಿಸುವಾಗ ಗೀತೆಯನ್ನು ಕರ್ಮವಿಜ್ಞಾನದ ಕಲ್ಪವೃಕ್ಷವೆಂದು ಪರಿಗಣಿಸಬಹು ದಾಗಿದೆ. ಗೀತೆಯ ಈ ಕರ್ಮಯೋಗದ ಬೆಳಕಿನಲ್ಲಿ ಜೀವನದ ಅನೇಕ ಸವಾಲುಗಳನ್ನು ನಾವು ಸಮರ್ಪಕವಾಗಿ ಬಗೆಹರಿಸಿ, ಪರಮಶಾಂತಿ ಮತ್ತು ಸಂತೃಪ್ತಿಯನ್ನು ಪಡೆಯಬಹುದು. ❖

## ಗೀತೆಯ ಪ್ರೇರಕ ಶಕ್ತಿ

ಸ್ವಾಮಿ ವಿವೇಕಾನಂದರು, 'ಉಪನಿಷತ್ತುಗಳು ಪ್ರತಿಯೊಂದು ಪುಟದಲ್ಲಿಯೂ ನನಗೆ ಶಕ್ತಿ, ಶಕ್ತಿ ಎಂದು ಹೇಳುತ್ತವೆ' ಎಂದು ಹೇಳುತ್ತಾರೆ. ದುರ್ಬಲವಾದ ಮನಸ್ಸುಗಳಿಗೆ ಮಹಾ ಬಲಯುತವಾದ ಭಾವಗಳು ಅರ್ಥವಾಗುವುದಿಲ್ಲ, ಹಿಡಿಸುವುದಿಲ್ಲ. ಅವುಗಳನ್ನು ನಿರೂಪಿಸಬೇಕೆಂಬ ಪ್ರಯತ್ನದಲ್ಲಿ ಅವರು ತಮ್ಮ ಸಣ್ಣತನದಿಂದ ಆ ಭಾವಗಳನ್ನು ನಿಸ್ಸಾರವಾಗಿ ಮಾಡುತ್ತಾರಷ್ಟೆ. ಆದರೆ ನಾವು ಸ್ವಲ್ಪ ಶಕ್ತಿಯನ್ನೂ ಮತ್ತು ಸತ್ತ್ವವನ್ನೂ ನಮ್ಮಲ್ಲಿ ಬೆಳಸಿಕೊಂಡುದಾದರೆ ಜೀವನದ ಪ್ರತಿಯೊಂದು ಸಂದರ್ಭ ದಲ್ಲಿಯೂ ನಮ್ಮನ್ನು ತಾಳ್ಮೆಯಿಂದ ನಿಲ್ಲಿಸುವ ಯಾವುದೋ ಒಂದನ್ನು ನಾವು ಗೀತೆಯಲ್ಲಿ ಕಂಡುಕೊಳ್ಳುತ್ತೇವೆ. ಕೇವಲ ನರಗಳಿಗೆ ಉಪಶಮನ ಬೇಕೆನ್ನುವವರಿಗೂ, ಜೀವನದಲ್ಲಿ ಕಷ್ಟಕರವಾದ ಘಟ್ಟಗಳನ್ನು ಇದಿರಿಸಲು ಭಯಪಡುವವರಿಗೂ ಪ್ರಿಯವಾದ ಸಾಮಗ್ರಿ, ಪುರಾಣಗಳಲ್ಲಿ ಬೇಕಾದಷ್ಟಿದೆ. ಆದರೆ ಯಾರು ಕಷ್ಟದಿಂದ ಹೋರಾಡುತ್ತಾ, ಉತ್ತಮ ಜೀವನವನ್ನು ನಡೆಸುವುದಕ್ಕೆ ಅಗತ್ಯವಾದ ಚಾಲನಶಕ್ತಿ ಬೇಕೆನ್ನುತ್ತಾರೆಯೋ, ಯಾರು ತಮ್ಮ ಹೊಣೆಹೊರೆಗಳನ್ನು ವಹಿಸಲು ಸಿದ್ಧವಾಗಿರುತ್ತಾರೆಯೋ ಅಂತಹ ವರಿಗೆ ಗೀತೆಯಲ್ಲಿ ಬೇಕಾದಷ್ಟು ಸಾಮಗ್ರಿ ಇದೆ. ಬಲಿಷ್ಠರಾದವರಿಗೆ ಮಾತ್ರ ಗೀತೆಯ ಬೆಲೆ ಅರ್ಥವಾಗಬಲ್ಲದು. ಸ್ವಾಮಿ ವಿವೇಕಾ ನಂದರು ಹೇಳುವಂತೆ 'ಆನೆಗೆ ಮಾತ್ರ ಸಿಂಹದ ಬಲ ಗೊತ್ತು, ಸೊಳ್ಳೆಗಲ್ಲ.' ಗೀತೆ ಇರುವುದು ನಮ್ಮನ್ನು ಲಾಲಿ ಹೇಳಿ ಮಲಗಿಸು ವುದಕ್ಕಲ್ಲ; ಆದರೆ ನಿದ್ರೆಯಿಂದ ಮತ್ತು ಸೋಮಾರಿತನದಿಂದ ನಮ್ಮನ್ನು ಬಡಿದೆಬ್ಬಿಸಿ ಮಹೋನ್ನತವಾದ ಆತ್ಮಸಾಕ್ಷಾತ್ಕಾರ ಮತ್ತು ಆತ್ಮಾಭಿವ್ಯಕ್ತತೆಯ ಕಡೆ ನಮ್ಮನ್ನು ಹುರಿದುಂಬಿಸಲಿಕ್ಕಾಗಿ. ಗೀತೆಯ ಶ್ಲೋಕಗಳಲ್ಲಿ ನಮ್ಮನ್ನು ಪುಷ್ಟಿಗೊಳಿಸುವ ಮತ್ತು ಹೊಸ ರೀತಿಯಲ್ಲಿ ನಾವು ಆಲೋಚಿಸುವಂತೆ ಮಾಡುವ ಶಕ್ತಿ ಇದೆ; ಅವು ನಮ್ಮನ್ನು ಹಳೆಯ ಜಾಡಿನಲ್ಲಿ ಹೋಗಗೊಡುವುದಿಲ್ಲ.

*— ಸ್ವಾಮಿ ರಂಗನಾಥಾನಂದ ('ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು', ಸಂ.೧, ಪು. ೬೭-೬೮)*